
ಲಕ್ಷ್ಮಿನಾರಾಯಣನ ಕಾಲಿಗೆ ಏನೋ ಪಚಕ್ಕೆಂದು ಮೆಟ್ಟಿದಾಗ ಗಂಟಲಿಂದ ಕೆಟ್ಟ ಶಬ್ದ ಹೊರಡಿಸಿದ. ಆ ಓರಿವಳದಲ್ಲಿ ಹಾಡು ಹಗಲಲ್ಲೂ ಬೆಳಕು ಕಡಿಮೆ. ಏನು ಮೆಟ್ಟಿತು ಎಂದು ನೋಡಲು ಬಲ್ಬಿನ ಸ್ವಿಚ್ಚು ಹತ್ತಿಸಿದ. ಅಲ್ಲಿ ಹಬ್ಬಿದ ದುರ್ನಾತವೂ, ಬಲ್ಬಿನ ಬೆಳಕಿನಲ್ಲಿ ನಿಚ್ಚಳವಾಗಿ ಕಾಣುತ್ತಿದ್ದ ದೃಶ್ಯವೂ ಸೇರಿ ಹೊಟೆಯಲ್ಲಿದ್ದುದು ಬಾಯಿಗೆ ಬಂದಂತಾಯಿತು! ಬಲಗಾಲಿನ ಹೆಬ್ಬೆರಳಿಂದ ನಡು ಮಧ್ಯದವರೆಗೆ ಬಡಿದ ಹೇಲು ಹೆಜ್ಜೆ ಇಟ್ಟಲ್ಲೆಲ್ಲ ಅಂಟಿಕೊಂಡಿತ್ತು!

ಕತ್ತಲೆಯಲ್ಲಿ ಕಾಣದೇ ಹಸಿ ಹೇಲಿನ ಗುಪ್ಪೆಯ ಮೇಲೆ ಕಾಲಿಟ್ಟಿದ್ದ. ಇಲ್ಲಿ ಹೇತವರು ಯಾರು ಎಂದು ಜೋರಾಗಿ ಬೊಬ್ಬೆ ಹೊಡೆವಷ್ಟರಲ್ಲಿ ಚಾ ಅರಿಸುತ್ತಿದ್ದ ಸುವರ್ಣಕ್ಕ ಅಷ್ಟಕ್ಕೇ ಬಿಟ್ಟು ಓಡಿ ಬಂದಳು. ಹಿಂದಿನ ದಿನದ ಕ್ರಿಕೆಟ್ ಹೈಲೈಟು ನೋಡುತ್ತ ಸೋಫಾ ಮೇಲೆ ಉರುಳಿಕೊಂಡಿದ್ದ ಮಹೇಶನೂ, ಕುನ್ನಿ ನೋಡು- ಕಾಗೆ ನೋಡು ಎನ್ನುತ್ತ ಕೂಸಿಗೆ ಚೂರೇಚೂರು ದೋಸೆ ತಿನ್ನಿಸುತ್ತ ಅಂಗಳದಲ್ಲಿ ತಿರುಗಾಡುತ್ತಿದ್ದ ಭಾಗ್ಯಶ್ರೀಯೂ ಧಾವಿಸಿ ಬಂದರು.



ಕುನ್ನಿಯೋ ಬೆಕ್ಕೋ ಮತ್ತೆಂತದ್ದೋ ಪ್ರಾಣಿಯದ್ದೋ ಅಲ್ಲವೇ ಅಲ್ಲ. ಮನುಷ್ಯರ ಮಲವೇ. ಯಾರೂ ತಿರುಗಾಡದ, ವಕ್ಕಲ ಮಕ್ಕಳೂ ಬರದ ಈ ಓರಿವಳದಲ್ಲಿ ಹೇತವರು ಅದಾರು? ಇಷ್ಟೆಲ್ಲ ಹೇಲಲು ಅದೆಷ್ಟು ತಿಂದಿರಬೇಕು ಎಂದು ಮಹೇಶ ಉದ್ಗರಿಸಿದ. ಸಣ್ಣ ಮಕ್ಕಳದ್ದಂತೂ ಇರಲಿಕ್ಕಿಲ್ಲ. ದೊಡ್ಡವರೇ.. ಮನೆಯಲ್ಲಿ ಎರಡು ದಿವಿನಾದ ಟಾಯ್ಲೆಟ್ ಇರಲು ಇಲ್ಲಿ ಹೀಗೆ ಹೇಲುವ ಗರಜು ಯಾರಿಗಪ್ಪ...

"ಅಯ್ಯಪ್ಪ.. ನನಗಂತೂ ವಾಂತಿಯೇ ಬಂದಂಗಾಗುತ್ತಿದೆ" ಎಂದು ಭಾಗ್ಯಶ್ರೀ ಕೂಸನ್ನೆತ್ತಿಕೊಂಡು ಮೆತ್ತಿ ಹತ್ತಿದಳು. "ಚೌಡಿಗೆ ಅನ್ನ ಮಾಡುವ ನಾ ಇದನ್ನೆಲ್ಲ ಮುಟ್ಟಬಾರದು" ಎಂದು ಸುವರ್ಣಕ್ಕ ಸರಿದುಕೊಂಡಳು. ಕಾಲು ತೊಳೆದು ಮತ್ತೆ ಮೀಯಲು ಲಕ್ಷ್ಮಿನಾರಾಯಣ ಹೋದಾಗ, ಮಹೇಶ "ಇದೆಲ್ಲಿಯ ಗ್ರಹಚಾರ ನನಗೆ" ಎಂದು ಶಪಿಸುತ್ತ ಮಾಸ್ಕು ಗ್ಲೌಸು ಹಾಕಿಕೊಂಡು ಹೇಲಿನ ರಾಶಿಯ ಮೇಲೆ ಇಷ್ಟು ಮರಳು ಮಣ್ಣು ಸುರಿದು ಸ್ವಚ್ಛ ಮಾಡಹೊರಟ. ಈ ಅತ್ತೆ ಸೊಸೆಯ ನಡುವಿನ ತಿಕ್ಕಾಟದಲ್ಲಿ ತನ್ನ ಪಾಡು ಹೀಗಾಯ್ತಲ್ಲ ಎಂದು ನಿಟ್ಟುಸಿರುಬಿಟ್ಟವ ಅವರಿಬ್ಬರಲ್ಲಿ ಯಾರ ಕೆಲಸ ಇದು ಎಂದು ತಲೆ ಕೆರೆದುಕೊಂಡ!

ಮನೆಯ ಮರ್ಯಾದೆಯ ಪ್ರಶ್ನೆ ಎಂದು ಹೊರಗಿನವರಿಗೆ ಯಾರೂ ಸೂಗುಡಲಿಲ್ಲವಾದರೂ ಆತಂಕ ಉಸಿರುಗಟ್ಟುವಷ್ಟಿತ್ತು. ಮೂರ್ನಾಲ್ಕು ದಿನ ಹಾಗೆಯೇ ಕಳೆಯಿತು.. ಮತ್ತೆ ಒಂದು ಮುಂಜಾನೆ ಓರಿವಳದ ಮೂಲೆಯಲ್ಲಿ ಹೇಲಿನ ಗುಪ್ಪೆಗೆ ನೊಣ ಮುಕುರಿಕೊಂಡಿತ್ತು.. ಇದು ಬಗೆಹರಿಯುವುದಲ್ಲ ಎಂದು ಮಹೇಶ ಓರಿವಳದಲ್ಲಿ ಸಿಸಿಟಿವಿ ಕ್ಯಾಮೆರಾ ಕೂಡಿಸಿದ. ಭಾಗ್ಯಶ್ರೀ ಯಲ್ಲಾಪುರದಲ್ಲಿ ಬಿಡಾರ ಹೂಡುವ ವಿಷಯ ಹೇಳಿದಾಗ ಮೂವರೂ ಯಾವ ವಿರೋಧವನ್ನೂ ತೋರಲಿಲ್ಲ. ಮುಂದಿನ ವಾರವೇ ಬಿಡಾರ ಸಾಗಿಸುವುದು ಎಂದಾಯಿತು. ಭಾಗ್ಯಶ್ರೀ ಉಮೇದಿಯಿಂದ ಪ್ಯಾಕಿಂಗ್ ಮಾಡತೊಡಗಿದಳು. ಇನ್ನಾದರೂ ಹೊಲಸಿನ ಸಮಸ್ಯೆ ಪರಿಹಾರವಾಗುತ್ತದೆಯೆಂದುಕೊಂಡರೆ ಮರು ಮುಂಜಾನೆ ಅಡುಗೆ ಕಟ್ಟೆಯ ಬುಡದಲ್ಲಿ ಮತ್ತೆ ಹೇಲಿನ ಗುಪ್ಪೆ ಬಿದ್ದಿತ್ತು.. !! ಆ ದಿನವಿಡೀ ಅಡಿಗೆ ಮಾಡಲು, ಉಣ್ಣಲು ಮನಸಾಗುವುದಾದ್ರೂ ಹೌದ?

ಲಕ್ಷ್ಮಿನಾರಾಯಣ ಜಾತಕದ ಕಟ್ಟು ಹಿಡಿದು ಭಟ್ಟರ ಮನೆಗೆ ಹೋಗಬೇಕಾಯಿತು. ಚೌಡಿಗೆ ಮೈಲಿಗೆಯಾಗಿ ಆಗಿರುವ ಕಾಟ ಇದು.. ಪಂಚಗೇವಿ ಹಾಕಿ ಶುದ್ಧ ಮಾಡಿ ಹದಿನಾರು ಸಾವಿರ ಜಪ ಮಾಡಿಸಬೇಕು. ಆರು ತಿಂಗಳು ಮನೆ ಖಾಲಿ ಮಾಡಬೇಕು.. ಇಲ್ಲವಾದರೆ ಹಿರಿತಲೆಗಳು ಉಳಿಯುವುದಿಲ್ಲ.. ಎಂದರಂತೆ.

'ನೀವೂ ನಮ್ಮೊಂದಿಗೆ ಬಿಡಾರ ಮನೆಗೆ ಬಂದು ಬಿಡಿ' ಎಂದು ತಂದೆ-ತಾಯಿಗೆ ಹೇಳಿದ ಮಹೇಶನನ್ನು ಕಂಗಾಲಾಗಿ ನೋಡಿದಳು ಭಾಗ್ಯಶ್ರೀ!

●